ಸಂಪೂರ್ಣವಾಗಿ ಆ edge ವರೆಗೆ encroachment ಮಾಡಿ ಅಲ್ಲಿ jungle ಬೆಳೆದು ಅದರ ಮುಖಾಂತರ ಅಲ್ಲಿ silt ಎಲ್ಲಾ ನಾಲೆಗೆ ಬೀಳುತ್ತಿದೆ. ಆದ್ದರಿಂದ ನಾನು ಈ ಸಾರಿ ವಿಶೇಷವಾದ ಹಣವನ್ನು jungle clearance and demarcation of our irrigation land ಇದಕ್ಕೆ ವಿಶೇಷವಾದ ಹಣವನ್ನು ಕೂಡ ಕೊಡುತ್ತಿದ್ದೇನೆ. ಮತ್ತೆ ಎಲ್ಲೆಲ್ಲಿ alignment ಇಲ್ಲ, ಈಗ ಪ್ರತಿಯೊಂದು ಯೋಜನೆಗೆ FICA ಏನಿದೆ ಹೊಲಗಾಲುವೆಗೆ ನಾವು ಅದಕ್ಕೆ blueprint ಮಾಡಿರುತ್ತೇವೆ. ಅದು topographical sheet ಅನ್ನು ಇಟ್ಟುಕೊಂಡು distributary, sub-distributary ನಿಂದ ಎಲ್ಲೆಲ್ಲಿ tail off ಆಗಿರುತ್ತದೆ. ಅದಕ್ಕೆ ನಾವು blue-print ಮಾಡಿರುತ್ತೇವೆ. ಅದನ್ನು ನಾನು ಪುನರ್ ಪರಿಶೀಲನೆ ಮಾಡಲಿಕ್ಕೆ ಹೇಳುತ್ತೇನೆ. ಮತ್ತೆ ಎಲ್ಲೆಲ್ಲಿ ವಿಶೇಷವಾಗಿ ಬಹಳಷ್ಟು ತೊಂದರೆ ಇದೆ ಅಲ್ಲಿ war footingನಲ್ಲಿ ನಾನು ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು: ಶ್ರೀ ಅಮರೇಶ್, ಇಲ್ಲ, ಮಾನ್ಯ ಕರಡಿ ಸಂಗಣ್ಣ ಅಮರಪ್ಪನವರೆ ಪ್ರಶ್ನೆ ಕೇಳಿ.

ಕೊಪ್ಪಳ ಜಿಲ್ಲೆಗೆ ಸ್ಟೀಲ್ ಕಾರಿಡಾರ್ ಯೋಜನೆ ಕುರಿತು

30(142) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಬಜೆಟ್ ಅಧಿವೇಶನದಲ್ಲಿ ಕೊಪ್ಪಳ ಜಿಲ್ಲೆಗೆ ಸ್ಟೀಲ್ ಕಾರಿಡಾರ್ ಯೋಜನೆಯನ್ನು ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯು ಇನ್ನೂ ಪ್ರಾರಂಭವಾಗದಿರಲು ಕಾರಣಗಳೇನು;

ಇ) ಸದರಿ ಕಾರಿಡಾರ್ ಯೋಜನೆಯಡಿಯಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಪ್ರಾರಂಭಿಸಲಾಗುವುದು;

ಈ) ಹಾಗಿದ್ದಲ್ಲಿ, ಈ ಕಾರಿಡಾರ್ ಯೋಜನೆಯಡಿಯಲ್ಲಿ ಪ್ರಾರಂಭಿಸಲಾಗುವ ಕೈಗಾರಿಕೆಗಳಲ್ಲಿ ಸ್ಥಳೀಯ ನಿರುದ್ಯೋಗಿಗಳಿಗೆ ಸೃಷ್ಟಿಸಲಾಗುವ ಉದ್ಯೋಗಗಳ ಸಂಖ್ಯೆ ಎಷ್ಟು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಬಂದಿದೆ

ಆ) ಯೋಜನೆಯು ಪ್ರಾರಂಭವಾಗಿರುತ್ತದೆ. ಕೆ.ಐ.ಎ.ಡಿ.ಬಿ ಮತ್ತು ವಾಡಾ ಸಂಸ್ಥೆಯ ಮುಖಾಂತರ ಸ್ಟೀಲ್ ಕಾರಿಡಾರಿನಲ್ಲಿ ಮಂಜೂರಾದ ಕೈಗಾರಿಕೆಗಳಿಗೆ ಜಮೀನು ಸ್ವಾಧೀನಪಡಿಸಿಕೊಳ್ಳುವ ಕೆಲಸವು ಪ್ರಾರಂಭವಾಗಿರುತ್ತದೆ.

ಇ) ಸ್ಟೀಲ್ ಕಾರಿಡಾರ್‌ನಲ್ಲಿ ಸಮಗ್ರ ಉಕ್ಕು ತಯಾರಿಕೆ ಹಾಗೂ ಸಂಬಂಧಪಟ್ಟ ಕೈಗಾರಿಕೆಗಳನ್ನು ಖಾಸಗಿ ಬಂಡವಾಳ ಹೂಡಿಕೆದಾರರು ಪ್ರಾರಂಭಿಸುವರು.

ಈ) ಸ್ಟೀಲ್ ಕಾರಿಡಾರ್‌ನ ಭಾಗವಾದ ಕೊಪ್ಪಳ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಅನುಮೋದನೆಯಾಗಿರುವ ಕಬ್ಬಿಣ ಮತ್ತು ಉಕ್ಕು ಉದ್ಯಮಗಳಲ್ಲಿ ಒಟ್ಟು 9191 ಜನರಿಗೆ ಉದ್ಯೋಗವಕಾಶ ಲಭಿಸಲಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಉತ್ತರವನ್ನು ಒದಗಿಸಿದ್ದಾರೆ. ನಾನು ಏನು ಪ್ರಶ್ನೆಯನ್ನು ಕೇಳಿದ್ದೇನೆಂದರೆ ಕಳೆದ ಬಜೆಟ್‌ನ ಅಧಿವೇಶನದಲ್ಲಿ ಕೊಪ್ಪಳ ಜಿಲ್ಲೆಗೆ ಸ್ಟೀಲ್ ಕಾರಿಡಾರ್ ಯೋಜನೆಯನ್ನು ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ 'ಹೌದು ಎಂದು ಅವರು ಉತ್ತರಿಸಿದ್ದಾರೆ. ಅದಕ್ಕೆ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ಈ ಯೋಜನೆ ಇನ್ನೂ ಪ್ರಾರಂಭವಾಗಿಲ್ಲ. ಈ ಕಾರಿಡಾರ್ ಯೋಜನೆಯ ಉದ್ದೇಶವೇನು? ಅದರಿಂದಾಗುವ ಅನುಕೂಲತೆಗಳೇನು? ಅದರ ವಿವರಣೆಯನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಅದಲ್ಲದೆ ಇವತ್ತು ಎರಡನೇ ಪ್ರಶ್ನೆ ಏನೆಂದರೆ ಈ ಕಾರಿಡಾರ್ ಯೋಜನೆಯಡಿ ಈಗಾಗಲೇ ಯಾವ್ಯಾವ ಉದ್ಯಮಗಳು ಪ್ರಾರಂಭವಾಗಿವೆ? ಮತ್ತು ಎಷ್ಟೆಷ್ಟು ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದಾರೆ? ಅದರ ವಿವರಣೆಯನ್ನು ಕೂಡ ನಾನು ಕೇಳ ಬಯಸುತ್ತೇನೆ. ಈ ಕಾರಿಡಾರ್ ಯೋಜನೆಯಲ್ಲಿ ಪ್ರಾರಂಭವಾಗಿರುವ ಕೈಗಾರಿಕೆಗಳಲ್ಲಿ ಸ್ಥಳೀಯವಾಗಿ ನಿರುದ್ಯೋಗಿಗಳಿಗೆ ಸೃಷ್ಟಿಸಲಾಗುವ ಉದ್ಯೋಗಗಳ ಸಂಖ್ಯೆ ಎಷ್ಟು? ಎಂದು ಕೇಳಿದ್ದೇನೆ. ಅದರ ಬಗ್ಗೆ ಕೂಡ ವಿವರಣೆಯನ್ನು ನಾನು ಸಚಿವರಿಂದ ಕೇಳಬಯುತ್ತೇನೆ.

ಶ್ರೀ ಮುರುಗೇಶ್ ಆರ್. ನಿರಾಣಿ: ಈಗ 50 ಕೋಟಿ ರೂಪಾಯಿಗಳಿಗಿಂತ ಕೆಳಗೆ ಬರುವಂಥ 11 ಪ್ರಾಜೆಕ್ಟ್‌ಗಳು clear ಆಗಿವೆ ಹಾಗೂ 50 ಕೋರಿ ರೂಪಾಯಿಗಳಿಗಿಂತ ಹೆಚ್ಚಿರುವಥ 5 ಪ್ರಾಜೆಕ್ಟ್‌ಗಳು clear ಆಗಿವೆ. ಎಲ್ಲರೂ individual ಆಗಿ public and private industries ಸ್ಥಾಪಿಸುತ್ತಿರುವುದರಿಂದ ಅವರು ಸೆಕ್ಷನ್ 109ನಲ್ಲಿ ಬೇಡುತ್ತಿರುವುದರಿಂದ ಯಾವುದೇ ರೀತಿ progress ಆಗಿಲ್ಲ, clear ಮಾತ್ರ ಮಾಡಿದ್ದೇವೆ. ಯಾವುದೇ ರೀತಿಯ land acquisition ಆಗಲಿ, final notification ಆಗಲಿ ಇದ್ದಾವುದೂ ಇತ್ಯರ್ಥವಾಗಿಲ್ಲ. ಅದರ ಅಂದಾಜು ಕೊಪ್ಪಳ ಜಿಲ್ಲೆಯಲ್ಲಿ clear ಮಾಡಿರುವ ಒಟ್ಟು ಯೋಜನೆಗಳಿಗೆ 10,000 ನಿರುದ್ಯೋಗಿಗಳಿಗೆ ಕೆಲಸ ಸಿಗುವಂಥ ಅವಕಾಶ ಇದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಕಾರಿಡಾರ್ ಅನ್ನು ಪ್ರಾರಂಭಿಸಿ ಉದ್ಯಮಗಳನ್ನು ಪ್ರಾರಂಭಿಸಿದರೆ ಅಲ್ಲಿ ಅನುಕೂಲವಾದಂಥ ವಾತಾವರಣ ನಿರ್ಮಾಣವಾಗುತ್ತಿತ್ತು. ಆದರೆ ಅಲ್ಲೇನಾಗಿದೆಯೆಂದರೆ ಕಾರಿಡಾರ್ ಯೋಜನೆ ಪ್ರಾರಂಭವಾಗಿಲ್ಲ. ಫ್ಯಾಕ್ಟರಿಗಳು ಪ್ರಾರಂಭವಾಗಿ ಬಿಟ್ಟಿವೆ. ಮೂರು ವರ್ಷಗಳಿಂದ sponge iron factories, steel factories ಎಷ್ಟೊಂದು factories ಬಂದಿವೆ. ಮತ್ತೆ ಆ factories ಹೇಗೆ ಬಂದಿವೆ ಎಂದರೆ ಒಂದು 1 ಕಿ.ಮೀ. ಅಂತರದಲ್ಲಿ ಪ್ರಾರಂಭವಾದರೆ ಮತ್ತೊಂದು 4, 3, 2, ಕಿ.ಮೀ. ಅಂತರದಲ್ಲಿ ಹೀಗೆ ಪ್ರಾರಂಭವಾಗಿವೆ. ಒಂದು ಕಡೆ ರೈತರ ಜಮೀನು ಕಳೆದುಕೊಂಡವನಿಗೆ ಅಲ್ಪಸ್ವಲ್ಪ ಹಣ ಅದು ಡೈರೆಕ್ಟ್ ಆಗಿ ಕಂಪೆನಿಯವರು ಖರೀದಿ ಮಾಡಿರುವಂಥದ್ದಿರ ಬಹುದು, KIADB ಮುಖಾಂತರ ಖರೀದಿಸಿದ್ದರಿಬಹುದು, ಅವನಿಗೇನೋ ಅಲ್ಪಸ್ವಲ್ಪ ಹಣ ಸಿಕ್ಕಿದೆ. ಪಕ್ಕಕ್ಕಿರುವಂಥ ಜಮೀನು ಮಾಲೀಕರಿಗೆ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಪರಿಸರ ಮಾಲಿನ್ಯ, ಜಲ ಮಾಲಿನ್ಯ ಇವೆಲ್ಲಾ ಮಾಲಿನ್ಯಗಳಿಂದ ಆ ರೈತರು ಯಾವುದೇ ಬೆಳೆ ಬೆಳೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಆ ಗ್ರಾಮಕ್ಕೆ ಭೇಟಿ ಕೊಟ್ಟರೆ ನೀವು white shirt ಹಾಕಿಕೊಂಡು ಹೋದರೆ ಎರಡು ಗಂಟೆಗಳಲ್ಲಿ black shirt ಆಗಿ ಕಾಣುತ್ತದೆ. ಇಂಥ ಮಾಲಿನ್ಯವನ್ನು ನಿಯಂತ್ರಣ ಮಾಡುವಂಥ ಕೆಲಸ ಕೂಡ ಸರ್ಕಾರದಿಂದ ಆಗುತ್ತಿಲ್ಲ. ಅಂಥ ಪ್ರದೇಶದಲ್ಲಿ ನೀವು township ಅನ್ನು ಪ್ರಾರಂಭ ಮಾಡುವಿರಾ ಹೇಗೆ ಎನ್ನುವುದನು ಸಹ ನಾನು ಕೇಳಬಯಸುತ್ತೇನೆ. ಜಮೀನು ಕಳೆದುಕೊಂಡ ಜಮೀನಿನ ಮಾಲೀಕರಾದ ರೈತೇನಿದ್ದಾರೆ ಅವರ ಮಕ್ಕಳಿಗೆ land losers ಅಂತ

consider ಮಾಡುತ್ತಿಲ್ಲ. ಕಾರಣವೇನೆಂದರೆ ನೇರವಾಗಿ ಜಮೀನನ್ನು ಅವರು ಖರೀದಿಸಿದ್ದಾರೆ. ಒಂದು ಕಂಪೆನಿ, ಒಬ್ಬ ಉದ್ದಿಮೆದಾರ ಆ ರೀತಿ ಖರೀದಿ ಮಾಡಿರುವುದರಿಂದ ಅದನ್ನು own land ಎಂದು ಇವರು consider ಮಾಡುತ್ತಾರೆ, ಹಾಗಾಗಿ ಆ ರೈತರ ಮಕ್ಕಳಿಗೆ ಉದ್ಯೋಗ ಕೂಡ ಸಿಗುತ್ತಿಲ್ಲ. ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಅದಕ್ಕಾಗಿ ಮಾನ್ಯ ಸಚಿವರು ಹಾಗೂ ಸರ್ಕಾರ ಇದಕ್ಕೆ ಇವತ್ತೇನು ಒಂದು ಕಾರ್ಯಸೂಚಿಯ ವ್ಯಾಪ್ತಿಯನ್ನು ಅಳವಡಿಸಿಕೊಳ್ಳುತ್ತೀರಿ ಮತ್ತು ಅಲ್ಲಿನ ಸ್ಥಳೀಯರಿಗೆ ಉದ್ಯೋಗದ ಲಭ್ಯತೆಯ ಅನುಕೂಲತೆಯನ್ನು ಮಾಡಿಕೊಡುತ್ತೀರಿ ಅಥವಾ ಸರ್ಕಾರದ ಮಟ್ಟದಲ್ಲಿ ಒಂದು policy decision ಮಾಡಿ ಆ ಒಂದು ಜಮೀನು ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗದ ಲಭ್ಯತೆ ಆಗದಿದ್ದರೆ ಇದೊಂದು ದೊಡ್ಡ ದುರಂತವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಆ ಪ್ರದೇಶದಲ್ಲಿ ಇವತ್ತು ರೈತರು ಉಳುಮೆ ಮಾಡಲಿಕ್ಕೂ ಆಗುತ್ತಿಲ್ಲ. ಉದ್ಯೋಗವೂ ಸಹ ಸಿಗುತ್ತಿಲ್ಲ. ಪರಿಸರವನ್ನು ಕಳೆದುಕೊಳ್ಳುತ್ತಿದ್ದೇವೆ. ರಸ್ತೆಗಳೆಲ್ಲಾ ಸಂಪೂರ್ಣವಾಗಿ ಹಾಳಾಗಿ ಹೋಗಿವೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ತಮ್ಮ ಮೂಲಕ ಸಚಿವರಲ್ಲಿ ಕೇಳ ಬಯಸುತ್ತೇನೆ.

ಶ್ರೀ ಮುರುಗೇಶ್ ಆರ್. ನಿರಾಣಿ: ಯಾವುದೇ ರೀತಿಯ ಕೈಗಾರಿಕೆಗಳು ಬೇರೆ ಬೇರೆ ಕಡೆ stagnant ಆಗಿ ಬೆಳೆಯಬಾರದು, ಒಂದೇ ಕಾಂಪೌಂಡ್‌ನಲ್ಲಿ ಬರುತ್ತಿರುವುದರಿಂದ ಇಂತಹ ಒಂದು Pollution Control Board ಆಗಿರಬಹುದು, ಆ ಕೈಗಾರಿಕೆಗಳಿಗೆ ನೀರು ಕೊಡುವುದು, ರಸ್ತೆಗಳನ್ನು ಅಭಿವೃದ್ಧಿಪಡಿಸುವುದು, ಮಾರ್ಕೆಟ್‌ಗೆ ಮತ್ತು ಬೇರೆ ಬೇರೆ ರೀತಿಯ ಅನುಕೂಲತೆಗಳು ಆಗಬೇಕೆನ್ನುವ ದೃಷ್ಟಿಯಿಂದಲೇ industrial areas ಮಾಡುತ್ತಿರುವುದು. ಆದರೆ ಕೆಲವೊಂದು ರೀತಿಯಿಂದ ಬೇರೆ ಬೇರೆ ಜಿಲ್ಲೆಗಳಲ್ಲಿ ರೈತರ ಕಡೆಯಿಂದ ಸಹಕಾರ ಸಿಗದಿದ್ದಾಗ ಆ ಕೈಗಾರಿಕೋದ್ಯಮಿಗಳೇ ಮುಂದೆ ಬಂದು ರೈತರ ಕಡೆಯಿಂದ ಜಮೀನುಗಳನ್ನು ಸ್ವತಃ consent ಮೇಲೆ purchase ಮಾಡಿದಾಗ, ಎಲ್ಲಾ ಬೇರೆ ಬೇರೆ ಇಲಾಖೆಗಳಿಂದ ಪರವಾನಗಿಯನ್ನು ತೆಗೆದುಕೊಂಡ ನಂತರ ನಾವು ಇಲಾಖೆಯ ವತಿಯಿಂದ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡಬೇಕಾಗುತ್ತದೆ. ಆದರೆ ಮಾನ್ಯ ಶಾಸಕರಾದ ನಮ್ಮ ಕರಡಿ ಸಂಗಣ್ಣನವರು ಹೇಳಿರುವುದು ಒಂದೇ ಕೈಗಾರಿಕೆ ಏರಿಯಾದಲ್ಲಿ

ಬರುವುದರಿಂದ ನಾವು ಮಾಲಿನ್ಯಗಳನ್ನು ತಡೆಗಟ್ಟಲಿಕ್ಕೆ ಮತ್ತೆ ಬೇರೆ ಬೇರೆ ಅನುಕೂಲತೆಗಳನ್ನು ಮಾಡಿ ಕೊಡಲಿಕ್ಕೆ ಅನುಕೂಲತೆಯಾಗುತ್ತದೆ. ಆ ನಿಟ್ಟಿನಲ್ಲಿ ಬರುವಂಥ ದಿವಸಗಳಲ್ಲಿ ಎಲ್ಲಾ ಜಿಲ್ಲೆಗಳು ಹಾಗೂ ತಾಲ್ಲೂಕುಗಳಲ್ಲಿ ಅಂದಾಜು ಒಂದು ಲಕ್ಷ ಎಕರೆ ಜಮೀನನ್ನು ಬೇರೆ ಬೇರೆ tier-2, tier-3 cityಗಳಲ್ಲಿ acquisition ಮಾಡಿಕೊಂಡು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಲ್ಲಿ ಕೊಡಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇದರೊಂದಿಗೆ ಡಾ: ಸರೋಜಿನಿ ಮಹಿಷಿ ವರದಿಯ ಹಿನ್ನೆಲೆಯಲ್ಲಿ ಅಂದಾಜು 85%ನಷ್ಟು ಸ್ಥಳೀಯರಿಗೆ, ಕನ್ನಡಿಗರಿಗೆ ಉದ್ಯೋಗ ಕೊಡಬೇಕೆಂದು ನಾವು ಕೈಗಾರಿಕೋದ್ಯಮಿಗಳಿಗೆ ಸೂಚನೆಯನ್ನು ಕೊಟ್ಟಿರುತ್ತೇವೆ. ಒಂದು ವೇಳೆ ಅವರು ಅದನ್ನು ಪಾಲಿಸದಿರುವ ಬಗ್ಗೆ ನಮ್ಮ ಗಮನಕ್ಕೆ ತಂದರೆ ಅವರು 85% ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಕೊಡಲು ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಕಾರಿಡಾರ್ ಪ್ರಾರಂಭವಾಗದೆನೇ ಫ್ಯಾಕ್ಟರಿಗಳು ಪ್ರಾರಂಭವಾಗಿ ಬಿಟ್ಟಿವೆ. ಅಲ್ಲಿ ಜಮೀನು ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗವಿಲ್ಲ. ಪರಿಸರ ಸಹ ಹಾಳು ಮಾಡಿಕೊಂಡಿದ್ದೇವೆ, ಅದಕ್ಕೇನು policy decision ಮಾಡುತ್ತಾರೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಮುರುಗೇಶ್ ಆರ್. ನಿರಾಣಿ: ರೈತರ ಜಮೀನನ್ನು ತೆಗೆದುಕೊಂಡಾಗ ಅವರ ಮಕ್ಕಳಿಗೆ ನೇರವಾಗಿ ಅವರ ಶಿಕ್ಷಣಕ್ಕೆ ಅನುಗುಣವಾಗಿ ಅವರಿಗೆ ಕಡ್ಡಾಯವಾಗಿ ಉದ್ಯೋಗವನ್ನು ಕೊಡಬೇಕೆಂದು ನಾವು ಸೂಚಿಸಿದ್ದೇವೆ. Townshipಗಳನ್ನು ಮಾಡಬೇಕೆಂದು ಹೇಳಿದರು, ಯಾವ industrial areas ಇರುತ್ತವೆ, ಅದಕ್ಕೆ ಅಂದಾಜು 10% ನಷ್ಟು integrated residential townshipಗಳನ್ನು ಮಾಡಬೇಕೆಂದು ಈಗಾಗಲೇ ನಾವು ಪ್ರಾರಂಭಿಸದ್ದೇವೆ. ದೇವನಹಳ್ಳಿಯಲ್ಲಿ ಒಂದು pilot project ಆಗಿ ತೆಗೆದುಕೊಂಡಿದ್ದೇವೆ. ಇದೇ ರೀತಿ ಇಡೀ ಕರ್ನಾಟಕದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ನಾವು townshipಗಳನ್ನು ಸಹ ಮಾಡುತ್ತಿದ್ದೇವೆ.

ಶ್ರೀ ಯು.ಟಿ. ಖಾದರ್: ಸಭಾಧ್ಯಕ್ಷರೆ, ಎಲ್ಲಾ ಕಡೆ ಉದ್ಯೋಗ ಕೊಡುವುದು ಅನುಷ್ಠಾನವಾಗುತ್ತಿಲ್ಲ.

ಅಧ್ಯಕ್ಷರು: ಆಯಿತು. ಈಗ ನಿಮ್ಮ ಪ್ರಶ್ನೆಗೆ ತಕ್ಕ ಉತ್ತರ ಬಂದಿದೆಯಲ್ಲಾ?

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಸಂಬಂಧಿಸಿದ ಪ್ರಶ್ನೆಗೆ ಅನುಗುಣವಾಗಿ ಉತ್ತರ ಕೇಳಲಿಕ್ಕೆ ಅವಕಾಶ ಇದೆ.

ಅಧ್ಯಕ್ಷರು: ಎಷ್ಟು ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ? ಬೇರೆ ರೂಪದಲ್ಲಿ ತನ್ನಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ನಮ್ಮ ರಸ್ತೆಗಳಲ್ಲಿ ಹೋಗಲಿಕ್ಕೆ ಆಗುತ್ತಿಲ್ಲ. ಕೈಗಾರಿಕೆ ಸಚಿವರು ಒಂದು ಮೀಟಿಂಗ್ ಮಾಡಿ, ಅಲ್ಲಿ ಸಿಮೆಂಟ್, ಸ್ಟೀಲ್, ಸ್ಪಾಂಜ್ ಐರನ್ ಫ್ಯಾಕ್ಟರಿಗಳಿವೆ. ಆ ರಸ್ತೆಯಲ್ಲಿ ನಾವು ಸಂಚಾರ ಮಾಡಲಿಕ್ಕೆ ಆಗುತ್ತಿಲ್ಲ.

ಶ್ರೀ ಮುರುಗೇಶ್ ಆರ್. ನಿರಾಣಿ: ಸದಸ್ಯರ ಮಾತನ್ನು ಒಪ್ಪುತ್ತೇನೆ. ಕೊಪ್ಪಳ ಜಿಲ್ಲೆಗೆ ಹೋಗುತ್ತೇವೆ. ಆ ರೈತರ ಮನವೊಲಿಸಿ ಭೂಮಿಯನ್ನು ಕೊಡಿಸುವುದಾದರೆ ನಾವು ಬೇರೆ ಬೇರೆ ಕಡೆ ಕೈಗಾರಿಕೆಗಳು ಬಾರದಂತೆ ಒಂದೇ ಕಡೆ ಕೈಗಾರಿಕೆಗಳು ಬರುವಂತೆ ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತೆ ಮತ್ತೆ ಕೇಳುತ್ತಾ ಹೋದರೆ ಹೇಗೆ?

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಮಂತ್ರಿಗಳಲ್ಲಿ ವಿನಂತಿ ಏನೆಂದರೆ, ರಸ್ತೆ ಕಾಮಗಾರಿಯನ್ನು ಆದಷ್ಟು ಬೇಗ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇವೆ.

ಶ್ರೀ ಮುರುಗೇಶ್ ನಿರಾಣಿ: ಆದ್ಯತೆ ಮೇರೆಗೆ ನಾವು ರಸ್ತೆ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು): ದಿನಾಂಕ 28.02.2011ರ 2ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 77 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳ ಉತ್ತರಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.